# ಅಂಚೆ ಮತ್ತು ತೆರಪಿನ ಶಿಕ್ಷಣ

## ದ್ವಿತೀಯ ಬಿ.ಕಾಂ. ಪದವಿ ಪರೀಕ್ಷೆ,

### ಆಗಸ್ಟ್ / ಸೆಪ್ಟೆಂಬರ್ 2010

**ಕನ್ನಡ ಭಾಷಾ ಪತ್ರಿಕೆ - ೨**

**(ಹೊಸಬರಿಗೆ)**

**(ಪಠ್ಯಗಳು : ಪ್ರಾಚೀನ ಕನ್ನಡ ಕಾವ್ಯ, ತುಘಲಕ್, ವಾಣಿಜ್ಯ ಕನ್ನಡ)**

ಅವಧಿ: *3* ಗಂಟೆಗಳು.] [ಅಂಕಗಳು: *80*

1. ಅ) ಒಂದರ ಭಾವಸ್ವಾರಸ್ಯವನ್ನು ಸಂದರ್ಭದೊಡನೆ ವಿವರಿಸಿ. 7 ಅಂಕಗಳು

೧) ಕಟ್ಟಿದ ಪಟ್ಟಮೆ ಸರವಿಗೆ
ನೆಟ್ಟನೆ ದೊರೆ ಪಿಡಿದ ಬಿಲ್ಲೆ ದಂಟಿಂಗೆಣೆ ಕ
ಣ್ಗೆಟ್ಟ ಮುದುಪಂಗೆ ಪಗೆವರ
ನೆಟ್ಟೆಲ್ವಂ ಮುಱಿವೊಡೆನಗೆ ಪಟ್ಟಂಗಟ್ಟಾ

೨) ಉಳ್ಳವರು ಶಿವಾಲಯವ ಮಾಡುವರು:
ನಾನೇನ ಮಾಡುವೆ ? ಬಡವನಯ್ಯಾ.
ಎನ್ನ ಕಾಲೇ ಕಂಭ, ದೇಹವೇ ದೇಗುಲ.
ಸಿರ ಹೊನ್ನ ಕಳಸವಯ್ಯಾ.
ಕೂಡಲ ಸಂಗಮದೇವ, ಕೇಳಯ್ಯಾ:
ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲಾ !

ಆ) ಎಂಟು ಪದಗಳಿಗೆ ಅರ್ಥ ಬರೆಯಿರಿ. : 4 ಅಂಕಗಳು

ಸಂಗರ, ಪುರಂದರ, ಸುರಗಿ, ಚರಿಗೆ, ಗೇಹ, ದೀಪ್ತಿ, ಉದಧಿ, ಪಣ, ಟಂಕಸಾಲೆ, ಹಸ್ತಕ, ಧುರಂಧರ, ಗಿರಡಿ

ಇ) ಎರಡಕ್ಕೆ ಟಿಪ್ಪಣಿ ಬರೆಯಿರಿ. 2×2=4 ಅಂಕಗಳು

೧) ಅನಂತವೀರ್ಯ ಕೇವಲಗಳು

೨) ಎಳ್ಳು- ಜೀರಿಗೆ

೩) ಶೇಖ್ ಇಮಾಮುದ್ದೀನ

2. ನಾಲ್ಕಕ್ಕೆ ಸಂದರ್ಭದೊಡನೆ ಸ್ವಾರಸ್ಯ ಬರೆಯಿರಿ. 4×3=12 ಅಂಕಗಳು

೧) ಸೂಳ್ಪಡೆಯಲಪ್ಪುದು ಕಾಣ ಮಹಾಜಿರಂಗದೊಳ್

೨) ನಿರ್ಮಲ ಧರ್ಮದಿಂದೆ ಪಾಲಿಸು ಧರೆಯಂ

೩) ಕಾವರೆ ಕಣೆಗೊಂಡರೆಂಬ ನುಡಿಗೆಡೆಯಕ್ಕುಂ

೪) ನಿಜವಾದ ಅರಸ ಮನುಷ್ಯನಾಗಿದ್ದೇ ದೊಡ್ಡವನಾಗಬೇಕು.

೫) ನನಗೆ ಶಾಂತಿಬೇಕಾಗಿದೆ. ರಕ್ತಪಾತ ನಿಲ್ಲಿಸಬೇಕಾಗಿದೆ.

೬) ಅಗಸನಾದರೆ ಏನಾಯಿತು, ಸ್ವಾಮಿ ? ಅಗಸ ತೊಳೆದಷ್ಟು ಕೊಳೆಯನ್ನು ಯಾವ ಧರ್ಮಗುರುವೂ ತೊಳೆದಿಲ್ಲ.

ಮುಂದುವರೆದಿದೆ.... 2

**3.** ಅ) ಮಾರಿದತ್ತನ ಮನಃ ಪರಿವರ್ತನೆಯಾದ ಬಗೆಯನ್ನು ವಿವರಿಸಿ.

**ಅಥವಾ**

ಮಹಮ್ಮದ ತುಘಲಕನ ಪಾತ್ರವನ್ನು ವಿವೇಚಿಸಿ. 10 ಅಂಕಗಳು

ಆ) ಅಕ್ಕನ ವಚನಗಳಲ್ಲಿ ಪರಮಾತ್ಮನ ಬಗೆಗಿನ ಹಂಬಲ ಹೇಗೆ ವ್ಯಕ್ತವಾಗಿದೆ ? ವಿವರಿಸಿ.

**ಅಥವಾ**

ರತನಸಿಂಹ, ಆಝುಂ - ಪಾತ್ರಗಳನ್ನು ಪರಿಚಯಿಸಿ. 5 ಅಂಕಗಳು

## ವಾಣಿಜ್ಯ ಕನ್ನಡ

**4.** ವಾಣಿಜ್ಯ ಪತ್ರ ಎಂದರೇನು ? ಅದರ ಅಂಗಗಳನ್ನು ವಿವರಿಸಿ.

**ಅಥವಾ**

ವಿಮೆ ಎಂದರೇನು ? ವಿಮೆಯ ಪ್ರಕಾರಗಳಾವುವು ? ವಿವರಿಸಿ. 10 ಅಂಕಗಳು

**5.** ಸಂಕ್ಷೇಪ ಲೇಖನ ಎಂದರೇನು ? ವಿವರಿಸಿ.

**ಅಥವಾ**

ಕಂಪನಿ ಕಾರ್ಯದರ್ಶಿಯ ಕಾರ್ಯನಿರ್ವಹಣೆಗಳನ್ನು ವಿವರಿಸಿ. 6 ಅಂಕಗಳು

**6.** **ಎರಡಕ್ಕೆ** ಟಿಪ್ಪಣಿ ಬರೆಯಿರಿ. $4\times2=8$ ಅಂಕಗಳು

೧) ಆಕ್ಷೇಪಣಾ ಪತ್ರ ೨) ಸಾಲಕೋರಿಕೆ ಪತ್ರ ೩) ಅಭ್ಯರ್ಥನ ಅರ್ಜಿ

**7.** ಅ) ಕೆಳಗಿನ **ಒಂದನ್ನು** ಕುರಿತು ಎರಡು ಪುಟಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ. 8 ಅಂಕಗಳು

೧) ಜಾಹಿರಾತು ೨) ವಾಣಿಜ್ಯ ವರದಿ

ಆ) **ಒಂದಕ್ಕೆ** ವಿವರಣೆ ಕೊಡಿ. 6 ಅಂಕಗಳು

೧) ವಾಣಿಜ್ಯ ಸುತ್ತೋಲೆ

೨) ವಾರ್ತಾಪತ್ರ

* ** *